# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 321/2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಮಹೇಶ್ವರ.ಎ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಅಪ್ಪಯ್ಯ | | **23.08.2022** |
| **ವಯಸ್ಸು** | ಃ 77 ವರ್ಷ | | |
| **ವೃತ್ತಿ** | ಃ ಇನ್ಸೂರೆನ್ಸ್ ಎಜೆಂಟ್ | **ಪ್ರಾ.ಸಾ.** | ಃ 13 |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** | ಃ 07 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ದಿಃ*09.06.2015* ರಂದು ಬೆಳಗ್ಗೆ *8* ರಿಂದ *8.30* ರ ಸಮಯದಲ್ಲಿ ನಾನು ಮನುವನ ಪಾರ್ಕ್ ನಲ್ಲಿ ವಾಂಕಿಂಗ್ ಮಾಡುತ್ತಿದ್ದಾಗ ಲಕ್ಷ್ಮಿಪುರಂ ಪೋ.ಠಾಣೆಯ ಪೋಲೀಸರು ಅಲ್ಲಿಗೆ ಬಂದಿದ್ದರು. ಆ ಕಾಲಕ್ಕೆ ನನಗೆ ಮತ್ತು ಇತರರಿಗೆ ಆ ಪಾರ್ಕ್ ನಲ್ಲಿ ಗಲಾಟೆ ಆಗಿದ್ದ ಸ್ಥಳವನ್ನು ತೋರಿಸಿದ್ದರು. ಆ ಸ್ಥಳದಲ್ಲಿ ದಿಃ*09.06.2015* ರಂದು ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಚಾಕು ತೋರಿಸಿ ಹೆದರಿಸಿರುವುದಾಗಿ ಮತ್ತು ಚೈನ್ ಕಿತ್ತುಕೊಳ್ಳಲು ಪ್ರಯತ್ನ ಮಾಡಿರುವುದಾಗಿ ಹೇಳಿದ್ದರು. ಆ ಸ್ಥಳದಲ್ಲಿ ಮಹಜರ್ ಮಾಡುತ್ತಿರುವುದಾಗಿ ಎಂದು ಹೇಳಿದ್ದರು. ಆ ಕಾಲಕ್ಕೆ ಮಹಜರ್ ಗೆ ನನ್ನ ಸಹಿ ಪಡೆದಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ-*2* ಮಹಜರ್ ಅದೇ ಇದ್ದು ಅದರಲ್ಲಿರುವ ಸಹಿ ನನ್ನದೇ ಇದೆ. ಸದರಿ ಸಹಿಯನ್ನು ನಿ.ಪಿ-*2(ಬಿ)* ಎಂದು ಗುರುತಿಸಿದೆ. ಆ ಕಾಲಕ್ಕೆ ಇನ್ನೊಬ್ಬ ಮಹಮದ್ ಅಜರುದ್ದೀನ್ ಸಹ ಮಹಜರ್ ಗೆ ಸಹಿ ಹಾಕಿದ್ದರು. ಆ ಮಹಜರ್ ಅನ್ನು ಕೋರ್ಟ್ ಹತ್ತಿರದಲ್ಲೇ ಇರುವ ಪಾರ್ಕ್ ನಲ್ಲಿ ಕುಳಿತುಕೊಳ್ಳಲು ಬೆಂಚ್ ಹಾಕಿರುವ ಸ್ಥಳದಲ್ಲಿ ಮಾಡಿದ್ದರು.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ಆ ದಿನ ಪಿರ್ಯಾದಿ ಮಹದೇವ ಮೂರ್ತಿ ಸಹ ಪೋಲೀಸರು ಜೊತೆ ಹಾಜರಿದ್ದು ಮತ್ತು ಅವರು ತೋರಿಸಿದ ಸ್ಥಳದಲ್ಲಿ ಮಹಜರ್ ಮಾಡುವುದಾಗಿ ಹೇಳಿದ್ದರು ಎಂದರೆ ನಿಜ. ಆ ಮಹದೇವ ಮೂರ್ತಿ ತೋರಿಸಿದ ಸ್ಥಳದಲ್ಲಿ ಮಹಜರ್ ಮಾಡಿದ್ದರು ಎಂದರೆ ನಿಜ. ಆ ಪಾರ್ಕ್ ನ ದಕ್ಷಿಣ ಪಶ್ಚಿಮ ಮೂಲೆಯಲ್ಲಿ ಭಾಗೆ ಮರದ ಪೂರ್ವಕ್ಕೆ ಪೂರ್ವಾಭಿಮುಖಕ್ಕೆ ಇರುವ ಕಲ್ಲು ಬೆಂಚನ್ನು ತೋರಿಸಿ ಅದೇ ಸ್ಥಳದಲ್ಲಿ ಕೃತ್ಯ ನಡೆದಿದ್ದು ಎಂದು ಹೇಳಿದ್ದರು ಎಂದರೆ ನಿಜ. ಆ ಕಾಲಕ್ಕೆ ಅದೇ ಸ್ಥಳದಲ್ಲಿ ದಿಃ*07.06.2015* ರಂದು ಮಂಜುನಾಥ ಸುರೇಶ್ ಗೌಡ ರೇಣುಕೇ ಗೌಡ, ದುಂಡಪ್ಪ ಬೆಟ್ಟಪ್ಪ ಗಡ್ಡರಿ ಮತ್ತು ಸಂಗಪ್ಪ ಬಂಡಿ ಇವರು ಹಾಜರಿದ್ದು ಆ ಪೈಕಿ ಮಂಜುನಾಥ ಸುರೇಶ್ ಗೌಡ ರೇಣುಕೇ ಗೌಡ ಇವರು ಗನ್ ತೋರಿಸಿ ಹೆದರಿಸಿದ್ದರು ಮತ್ತು ಉಳಿದವರು ಹೆದರಿಸಿ ಅವಾಚ್ಯ ಶಬ್ದಗಳಿಂದ ಬೈದು ಗಲಾಟೆ ಮಾಡಿ ಹೊಡೆದರು ಮತ್ತು ಮಂಜುನಾಥ ಸುರೇಶ್ ಗೌಡ ರೇಣುಕೇ ಗೌಡ ಇವರು *15* ಗ್ರಾಂ ಚಿನ್ನದ ಸರವನ್ನು ಕಿತ್ತುಕೊಂಡು ಹೋಗಿದ್ದರು ಎಂದು ಪಿರ್ಯಾದಿ ಮಹದೇವ ಮೂರ್ತಿ ಅವರು ಹೇಳಿದ್ದರು ಎಂದರೆ ನಿಜ. ಬೆಳಗ್ಗೆ *8.30* ರಿಂದ *9.30* ರ ವರೆಗೆ ಆ ಮಹಜರ್ ಅನ್ನು ಬರೆದಿದ್ದರು ಎಂದರೆ ನಿಜ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಕೆ.ಆರ್.ಎಸ್ ರವರಿಂದಃ-**

*3.* ಆ ದಿನ ನನಗೆ ಮಹಜರ್ ಗೆ ಬರುವಂತೆ ನೋಟೀಸ್ ಕೊಟ್ಟಿರಲಿಲ್ಲ. ನನ್ನ ಮನೆ ಚಾಮರಾಜಪುರಂನಲ್ಲಿ ಇದೆ. ಮನೆ ಸಂಖ್ಯೆ *1082/1,* ನರಸರಾಜ ರೋಡ್, ಚಾಮರಾಜಪುರಂ

ಇದು ನನ್ನ ವಿಳಾಸ ಇದೆ. ಕಳೆದ *10* ವರ್ಷಗಳಿಂದಲೂ ಅದೇ ವಿಳಾಸದಲ್ಲಿ ಇದ್ದೇನೆ. ಲಕ್ಷ್ಮಿಪುರಂ ಪೋ.ಠಾಣೆಯ ಇನ್ಸ್ ಪೆಕ್ಟರ್ ನನಗೆ ಆತ್ಮೀಯರು ಎಂದರೆ ಸರಿಯಲ್ಲ. ಅವಶ್ಯಕತೆ ಇದ್ದಾಗ ನನ್ನಿಂದ ಕೆಲಸ ಪಡೆಯುತ್ತಾರೆ ಎಂದರೆ ಸರಿಯಲ್ಲ. ನಿ.ಪಿ-*2* ರಂತೆ ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಪೋ.ಠಾಣೆಯಲ್ಲಿ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಪಿರ್ಯಾದಿದಾರರಿಗೆ ಸಹಾಯ ಮಾಡಲು ಮಹಜರ್ ಗೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

*4.* ನಿ.ಪಿ-*2* ರಲ್ಲಿ ಹೇಳಿರುವ ವಿಳಾಸದಲ್ಲಿ ನನ್ನ ಮಗಳ ಮನೆ ಇದೆ ನಾನು ಆಗಾಗ ಅಲ್ಲಿಗೆ ಹೋಗಿ ಬರುವುದು ಮಾಡುತ್ತೇನೆ ಆ ಕಾರಣಕ್ಕೆ ನಿ.ಪಿ-*2* ರಲ್ಲಿ ಆ ವಿಳಾಸ ನಮೂದಾಗಿದೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ**

*5.* ಮೈಸೂರುನಲ್ಲಿ ನಮ್ಮ ಆತ್ಮೀಯರು ಮತ್ತು ಸಂಬಂಧಿಗಳ ಬಹಳಷ್ಟು ಮನೆಗಳು ಇವೆ. ಸರ್ಕಾರಿ ದಾಖಲೆಗಳಲ್ಲಿ ನಾನು ನನ್ನ ನಿಕಟವರ್ತಿಗಳ ವಿಳಾಸವನ್ನು ನಮೂದು ಮಾಡುವುದಿಲ್ಲ. ನಿ.ಪಿ-*2* ಕ್ಕೂ ಸಹ ಪೋಲೀಸರು ಬರೆದ ಬಳಿಕ ಅದರ ವಿಷಯಗಳನ್ನು ತಿಳಿದುಕೊಳ್ಳದೇ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*